***ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃರವರ ನ್ಯಾಯಾಲಯಃ ಕೊಪ್ಪ***
***ಸಿಸಿ.ನಂ.659/2022***

ಸಾಕ್ಷಿಯ ಹೆಸರುಃ ಎಸ್ ಎನ್ ಶ್ರೀನಿವಾಸ ಚಾಸಾಃ 1

ತಂದೆಯ ಹೆಸರುಃ ನಾಗಪ್ಪ ಗೌಡ ಪ್ರಾಸಾಃ 1

ವಯಸ್ಸುಃ 50 ವರ್ಷ

ಉದ್ಯೋಗಃ ವ್ಯವಸಾಯ

ವಾಸಃ ಸಿಗಸೆ, ಅಡಿಗೆಬೈಲು ಗ್ರಾಮ, ಕೊಪ್ಪ ತಾಲೂಕು

ದಿನಾಂಕಃ12/03/2025 ರಂದು ಪ್ರಮಾಣವಚನ ಬೋಧಿಸಲಾಯಿತು.

**ಃಃ ಮುಖ್ಯ ವಿಚಾರಣೆಃಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃಃ**

ನಾನು ಅಡಿಗೆ ಬೈಲು ಗ್ರಾಮದಲ್ಲಿ ಸರ್ವೆ ನಂಬರ್ 155 ಹಾಗೂ 156 ರಲ್ಲಿ 4 ಎಕರೆ ಹಾಗೂ ಸರ್ವೆ ನಂಬರ್ 158 ರಲ್ಲಿ ಒಂದು ಎಕರೆ, ಒಂದು ಗುಂಟೆ ಜಮೀನು ಹೊಂದಿರುತ್ತೇನೆ. ಸದರಿ ಜಮೀನಿನಲ್ಲಿ ನಾನು 70 ಅಡಿಕೆ ಮರಗಳನ್ನು ಬೆಳೆದಿರುತ್ತೇನೆ. 70 ಅಡಿಕೆ ಮರಗಳನ್ನು ಯಾರೋ ಅರ್ಧ ಭಾಗಕ್ಕೆ ಕಡಿದು ಅವುಗಳಲ್ಲಿದ್ದ ಸುಮಾರು 250 ಅಡಿಕೆ ಗೊನೆಗಳನ್ನು ಕಳುವು ಮಾಡಿರುತ್ತಾರೆ. ಆದ್ದರಿಂದ ನಾನು ದಿನಾಂಕಃ22/12/2021 ರಂದು ದೂರನ್ನು ನೀಡಿರುತ್ತೇನೆ.

ದಿನಾಂಕಃ23/12/2021 ರಂದು ಬೆಳಿಗ್ಗೆ 11-00 ಗಂಟೆ ಸಮಯದಲ್ಲಿ ಪೋಲಿಸರು ಮಹಜರ್ ಗಾಗಿ ಸ್ಥಳಕ್ಕೆ ಬಂದಿರುತ್ತಾರೆ. ಸದರಿ ಮಹಜರನ್ನು ಬೆಳಿಗ್ಗೆ 11-00 ರಿಂದ ಮಧ್ಯಾಹ್ನ 12-00 ಗಂಟೆಯವರೆಗೂ ಜರುಗಿಸಿರುತ್ತಾರೆ. ಆ ಸಮಯದಲ್ಲಿ ಪೋಲಿಸರು ಮೊಬೈಲ್ ಮೂಲಕ ಭಾವಚಿತ್ರವನ್ನು ತೆಗೆದುಕೊಂಡಿರುತ್ತಾರೆ. ಆ ಸಮಯದಲ್ಲಿ 2 ಸಾಕ್ಷಿದಾರರುಗಳೂ ಸಹಾ ಇದ್ದರು. ನನ್ನ ಬಾಬ್ತು ತೋಟದಲ್ಲಿ ಅಡಿಕೆ ಗೊನೆಗಳನ್ನು ಕಳ್ಳತನ ಮಾಡಿಕೊಂಡು

ಹೋಗಿರುವ ಕಳ್ಳರನ್ನು ಪತ್ತೆ ಮಾಡಿಕೊಡಲು ದೂರನ್ನು ಕೊಟ್ಟಿರುತ್ತೇನೆ.

ದಿನಾಂಕಃ26/12/2021 ರಂದು ಪೋಲಿಸರು ನನ್ನನ್ನು ಪೋಲಿಸ್ ಠಾಣೆಗೆ ಕರೆದು ಚಿನ್ನಪ್ಪ ಹಾಗೂ ಸುರೇಶ್ ಅವರನ್ನು ತೋರಿಸಿರುತ್ತಾರೆ, ಅವರೇ ಕಳ್ಳರು ಎಂದು ನಾನು ತಿಳಿಸಿರುತ್ತೇನೆ. ನಂತರ ಪೋಲಿಸರು ನನ್ನನ್ನು ಮತ್ತೆ ಕರೆದು ಪೂರ್ಣೇಶ ಹಾಗೂ ನಾಗೇಶ್ ಅವರನ್ನು ತೋರಿಸಿರುತ್ತಾರೆ. ನಂತರ ಪೋಲಿಸರು ನನ್ನನ್ನು ಪೊಲಿಸ್ ಠಾಣೆಗೆ ಕರೆದು ಸ್ವಲ್ಪ ಅಡಿಕೆ ಸಿಕ್ಕಿರುತ್ತದೆ, ಅದನ್ನು ನನ್ನ ವಶಕ್ಕೆ ನನ್ನಿಂದ ಬಾಂಡನ್ನು ಪಡೆದುಕೊಂಡು ನೀಡಿರುತ್ತಾರೆ. ಕಳುವು ಮಾಡಿಕೊಂಡು ಹೊಗಿರುವ ಅಡಿಕೆ ಸುಮಾರು ಒಂದು ಲಕ್ಷದ ಐವತ್ತು ಸಾವಿರ ರೂಪಾಯಿಗಳು ಆಗಿತ್ತು ಆದ್ದರಿಂದ ನನಗೆ ಒಂದು ಲಕ್ಷದ ಐವತ್ತು ಸಾವಿರ ರೂಪಾಯಿಗಳ ನಷ್ಟವಾಗಿರುತ್ತದೆ. ಮಹಜರನ್ನು ಮಾಡುವ ಸಮಯದಲ್ಲಿ ಸ್ಥಳವನ್ನು ಪಂಚರ ಸಮಕ್ಷಮದಲ್ಲಿ ನಾನೇ ಪೋಲಿಸರಿಗೆ ತೋರಿಸಿರುತ್ತೇನೆ. ಆ ಸಮಯದಲ್ಲಿ ಚಾಸಾ 2 ಮತ್ತು 3 ರವರು ಹಾಜರಿದ್ದರು.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೋಲಿಸರು ನನ್ನನ್ನು ವಿಚಾರಿಸಿದಾಗ ದಿನಾಂಕಃ24/12/2021 ರಂದು ನನ್ನ ಮರುಹೇಳಿಕೆಯನ್ನು ನೀಡಿರುತ್ತೇನೆ.

ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ.

(ಈ ಹಂತದಲ್ಲಿ 3 ಮತ್ತು 4 ನೇ ಆರೋಪಿತರು ನ್ಯಾಯಾಲಯದ ಮುಂದೆ ಗೈರು ಹಾಜರಾಗಿದ್ದರಿಂದ ಅವರ ಪರ ಅವರ ವಕೀಲರು ವಿನಾಯಿತಿ ಅರ್ಜಿಯನ್ನು ಸಲ್ಲಿಸಿರುತ್ತಾರೆ ಹಾಗೂ ಅವರ ಗುರುತಿನ ಬಗ್ಗೆ ಯಾವುದೇ ತಕರಾರು ಇಲ್ಲವೆಂದು ತಿಳಿಸಿರುತ್ತಾರೆ.)

ನ್ಯಾಯಾಲಯದ ಮುಂದಿರುವ ಚಿನ್ನಪ್ಪ, ಸುರೇಶ ಹಾಗೂ ಪುನೀತ್ ಅವರನ್ನು ನೋಡಿ ಸಾಕ್ಷಿ ಗುರುತಿಸುತ್ತಾರೆ.

ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಲಾಯಿತು. ಸದರಿ ದಾಖಲೆ ದೂರಾಗಿದ್ದು ಅದನ್ನು ನಿಪಿ.1 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು.

ಸ್ಥಳ ಮಹಜರನ್ನು ನಿಪಿ.2 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ತೆಗೆದುಕೊಂಡಿರುವ 2 ಭಾವಚಿತ್ರಗಳಲ್ಲಿ ಸಾಕ್ಷಿಯು ತನ್ನನ್ನು ನೋಡಿ ಗುರುತಿಸುತ್ತಾರೆ. ಸದರಿ ಭಾವಚಿತ್ರಗಳನ್ನು ನಿಪಿ.3 ಹಾಗೂ 4 ಎಂದು ಹಾಗೂ ಒಂದು ಸಿಡಿಯನ್ನು ನಿಪಿ.5 ಎಂದೂ ಗುರುತಿಸಲಾಯಿತು.

**<u>ಪಾಟೀ ಸವಾಲುಃ 1 ನೇ ಆರೋಪಿ ಪರಃ ಶ್ರೀ ಬಿಕೆವಿ., ವಕೀಲರವರಿಂದಃ</u>**

ಸರ್ವೆ ನಂಬರ್ 155 ರಲ್ಲಿ ನನಗೆ ಒಂದು ಎಕರೆ, ಹದಿನೆಂಟು ಗುಂಟೆ, ಸರ್ವೆ ನಂಬರ್ 156 ರಲ್ಲಿ 34 ಗುಂಟೆ ಹಾಗೂ ಸರ್ವೆ ನಂಬರ್ 158 ರಲ್ಲಿ ಒಂದು ಎಕರೆ ಒಂದು ಗುಂಟೆ ಜಮೀನು ಇರುತ್ತವೆ. ಸದರಿ ಜಮೀನುಗಳ ಒಟ್ಟು ವಿಸ್ತೀರ್ಣ 4 ಎಕರೆ ಇರುವುದಿಲ್ಲ ಎಂದರೆ ಸರಿ. ಸರ್ವೆ ನಂಬರ್ 155 ಹಾಗೂ 156 ರಲ್ಲಿ ಇರುವ ಅಡಿಕೆ ತೋಟ ನಮ್ಮ ವಾಸದ ಮನೆಯಿಂದ ಹತ್ತಿರ ಇದೆ, ಸರ್ವೆ ನಂಬರ್ 158 ರಲ್ಲಿರುವ ಅಡಿಕೆ ತೋಟ ನಮ್ಮ ಮನೆಯಿಂದ ಸುಮಾರು ಮುಕ್ಕಾಲು ಕಿಮೀ ದೂರದಲ್ಲಿ ಇರುತ್ತದೆ. ಸರ್ವೆ ನಂಬರ್ 158 ರಲ್ಲಿ 400-500 ಅಡಿಕೆ ಮರಗಳು ಇರುತ್ತವೆ. ಸರ್ವೆ ನಂಬರ್ 158 ರಲ್ಲಿರುವ ಜಮೀನು ನನ್ನ ಖಾತೆಗೆ ಸುಮಾರು 5 ವರ್ಷಗಳ ಹಿಂದೆ ಬಂದಿರುತ್ತದೆ. ಸದರಿ ಜಮೀನು ಸರ್ಕಾರ ನನಗೆ ಸಾಗುವಳಿ ಚೀಟಿಯ ಮೂಲಕ ಮಂಜೂರು ಮಾಡಿದ್ದರಿಂದ ಬಂದಿರುತ್ತದೆ. ರೆವಿನ್ಯೂ ಇಲಾಖೆಯವರು ಸುಮಾರು 6 ವರ್ಷಗಳ ಹಿಂದೆ ಸರ್ವೆ ನಂಬರ್ 158 ರಲ್ಲಿ ಸರ್ವೆಯನ್ನು ಮಾಡಿರುತ್ತಾರೆ. ಮಂಜೂರಾತಿಗಾಗಿ ನಾನು ಅರ್ಜಿಯನ್ನು ಸಲ್ಲಿಸಿದಾಗ, ಸದರಿ ಅರ್ಜಿಯಲ್ಲಿ ಸರ್ವೆ ನಂಬರ್ 158 ರಲ್ಲಿ ಎಷ್ಟು ವರ್ಷದ ಅಡಿಕೆ ಮರಗಳು ಇರುವ ಬಗ್ಗೆ ನಮೂದಿಸಿರುತ್ತೇನೆಯೇ ಎಂದರೆ ನಾನು ನೋಡಿರುವುದಿಲ್ಲ. ರೆವಿನ್ಯೂ ಇಲಾಖೆ ಯವರು ಸ್ಥ,ಳಕ್ಕೆ ಬಂದು ಸರ್ವೆಯನ್ನು ಮಾಡಿದಾಗ ಅಡಿಕೆ ಮರಗಳ ವಯಸ್ಸನ್ನು ವರದಿಯಲ್ಲಿ ನಮಾದಿಸಿರುತ್ತಾರೆಯೇ ಎಂದರೆ ನಾನು ಅರ್ಜಿಯಲ್ಲಿ ಸದರಿ ಅಡಿಕೆ ಮರಗಳು ಸುಮಾರು 30 ವರ್ಷಗಳ ವಯಸ್ಸಿನವು ಇರುತ್ತವೆ ಎಂಬ ಬಗ್ಗೆ ನಮೂದಿಸಿರುತ್ತೇನೆ. ಸದರಿ ಮರಗಳ ವಯಸ್ಸನು ರೆವಿನ್ಯೂ ಇಲಾಖೆಯವರು

ವರದಿಯಲ್ಲಿ ನಮೂದಿಸಿರುತ್ತಾರೆಯೇ ಎಂಬ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸರ್ವೆ ನಂಬರ್ 158 ರ ಚೆಕ್ಕುಬಂಧಿಗಳು ನನಗೆ ಗೊತ್ತು, ಸುತ್ತಲೂ ಕಂದಾಯ ಇಲಾಖೆ ಹಾಗೂ ಕಾಡು ಇರುತ್ತದೆ.

ಸರ್ವೆ ನಂಬರ್ 158 ರಲ್ಲಿ ಒಟ್ಟು ಎಷ್ಟು ಸಾಲುಗಳಲ್ಲಿ ಅಡಿಕೆ ಮರಗಳನ್ನು ಬೆಳೆದಿರುತ್ತೇನೆ ಎಂದರೆ 50 ಸಾಲುಗಳಲ್ಲಿ ಬೆಳೆದಿರುತ್ತೇನೆ. ಒಂದು ಸಾಲಿನಲ್ಲಿ ಸುಮಾರು 20 ಅಡಿಕೆ ಮರಗಳನ್ನು ಬೆಳೆದಿರುತ್ತೇನೆ. ಒಂದು ಸಾಲಿನಲ್ಲಿ ಎರಡು ಮರಗಳು ಕೆಲವು ಸಾಲಿನಲ್ಲಿ ಒಂದೇ ಮರ ಹಾಗಾಗಿ ಎಲ್ಲಾ ಸಾಲುಗಳಲ್ಲಿ ಮರಗಳನ್ನು ಕಡಿದಿರುತ್ತಾರೆ.

ಸಾಮಾನ್ಯವಾಗಿ 30 ವರ್ಷ ವಯಸ್ಸಿನ ಅಡಿಕೆ ಮರದಲ್ಲಿ 25 ರಿಂದ 30 ಕೆಜಿ ಹಸಿ ಅಡಿಕೆ ಬೆಳೆಯಬಹುದು. 70 ಬಿದ್ದಂತಹ ಮರಗಳಿಂದ ಪ್ರತಿಯೊಂದು ಮರದಿಂದ ಸುಮಾರು 25-30 ಕೆಜಿಯಷ್ಟು ಹಸಿ ಅಡಿಕೆ ಇರಬಹುದು. ಆ ಸಮಯದಲ್ಲಿ ಸ್ವಲ್ಪ ಹಸಿ ಅಡಿಕೆಯ ಕಾಯಿಗಳೂ ಸಹಾ ಬಿದ್ದಿರುತ್ತವೆ. ಸದರಿ ಬಿದ್ದ ಅಡಿಕೆ ಕಾಯಿಗಳನ್ನು ಪೋಲಿಸರು ಅಮಾನತಿನಡಿಯಲ್ಲಿ ವಶಕ್ಕೆ ಪಡೆದಿರುತ್ತಾರೆಯೇ ಎಂದರೆ ಇಲ್ಲ. ಅವುಗಳು ಬಿದ್ದಿರುವ ಬಗ್ಗೆ ಪೋಲಿಸರು ನೋಡಿರುತ್ತಾರೆ.

ಮಹಜರನ್ನು ಬರೆಯುವ ಪೂರ್ವದಲ್ಲಿ ಮಹಜರಿಗೆ ಬರಬೇಕೆಂದು ಪೋಲಿಸರು ನನಗೆ ಯಾವುದೇ ನೋಟಿಸನ್ನು ನೀಡಿರುವುದಿಲ್ಲ. ಮಹಜರಿನಲ್ಲಿ ಸಹಿಯನ್ನು ಮಾಡಿದ ನಂತರ ಮಹಜರಿನಲ್ಲಿ ಬರೆದಿರುವ ಅಂಶಗಳನ್ನು ಓದಿಕೊಂಡು ಸದರಿ ಸಹಿಯ ಕೆಳಗೆ ನಾನು ಮತ್ತೆ ಏನಾದರೂ ಸಹಿಯನ್ನು ಮಾಡಿರುತ್ತೇನೆಯೇ ಎಂದರೆ ನಾನು ನೋಡಿರುವುದಿಲ್ಲ. ಸದರಿ ಮಹಜರಿನಲ್ಲಿ ಬರೆದಿರುವ ಅಂಶಗಳನ್ನು ಪೋಲಿಸರು ಓದಿ ನನಗೆ ಹೇಳಿರುವುದಿಲ್ಲ.

ಮಹಜರ್ ಸಮಯದಲ್ಲಿ ಬಂದಂತಹ ಎನ್ನಲಾದ ಸಾಕ್ಷಿದಾರರುಗಳಿಗೆ ಪೋಲಿಸರು ಏನಾದರೂ ನೋಟಿಸನ್ನು ನೀಡಿರುತ್ತಾರೆಯೇ ಎಂಬ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಒಟ್ಟು 70 ಅಡಿಕೆ ಮರಗಳಿಂದ ಒಂದು ಮರಕ್ಕೆ ಸುಮಾರು 30 ಕೆಜಿ ಆದರೆ ಒಟ್ಟು 2100 ಕೆಜಿಯಷ್ಟು ಹಸಿ ಅಡಿಕೆ ಆಗುತ್ತದೆ ಎಂದರೆ ಸರಿ.

ಸದರಿ ಮಹಜರಿನಲ್ಲಿ ಪೋಲಿಸರು ಏನು ಚೆಕ್ಕುಬಂಧಿಗಳನ್ನು ಬರೆದಿರುತ್ತಾರೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. 180 ರಿಂದ 200 ಕೆಜಿಯಷ್ಟು ಅಡಿಕೆ ಕಳುವಾಗಿರುವ ಬಗ್ಗೆ ನನ್ನ ದೂರಿನಲ್ಲಿ ನಮೂದಿಸಿರುತ್ತೇನೆ. ನಿಪಿ.1 ರಲ್ಲಿ ಈ ರೀತಿ ನಮೂದಾಗಿರುವುದಿಲ್ಲ ಎಂದರೆ ಸರಿ. ಮಹಜರ್ ನಲ್ಲಿ ನಾನು ಹಾಗೂ ಪಂಚರು ಸುಮಾರು ರೂ.1,50,000/- ನಷ್ಟು ನಷ್ಟ ಉಂಟಾಗಿರುವ ಎಂಬ ಬಗ್ಗೆ ನಿರ್ಧಾರವನ್ನು ಮಾಡಿರುತ್ತೇವೆ. ನನಗೆ ರೂ.10,000/-ಗಳ ನಷ್ಟವಾಗಿರುತ್ತದೆ ಎಂಬ ಬಗ್ಗೆ ಮಹಜರ್ ಕಾಲದಲ್ಲಿ ನಾನು ಹೇಳಿರುವುದಿಲ್ಲ.

ನನ್ನ ಸಮಕ್ಷಮದಲ್ಲಿ ಪೋಲಿಸರು ಘಟನಾಸ್ಥಳದ ನಕಾಶೆಯನ್ನು ಏನಾದರೂ ತಯಾರಿಸಿರುತ್ತಾರೆಯೇ ಎಂದರೆ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ತೆಗೆದುಕೊಂಡಿರುವ ಭಾವಚಿತ್ರಗಳನ್ನು ನಾನು ಅದೇ ಸಮಯದಲ್ಲಿ ನೋಡಿರುವುದಿಲ್ಲ. ನ್ಯಾಯಾಲಯದ ಮುಂದಿರುವ ಭಾವಚಿತ್ರಗಳನ್ನು ಯಾರು, ಯಾವಾಗ, ಎಲ್ಲಿ ತೆಗೆದುಕೊಂಡಿರುತ್ತಾರೆ ಎಂಬ ಬಗ್ಗೆ ಮಹಜರಿನಲ್ಲಿ ನಮೂದಿಸಿರುವ ಬಗ್ಗೆ ನನಗೆ ಗೊತ್ತಿದೆ ಎಂದರೆ ನಮೂದಿಸಿರುತ್ತಾರೆ. ನಿಪಿ.4 ರ ಭಾವಚಿತ್ರದಲ್ಲಿ ಬೇಲಿಯಿಂದ ಆಚೆಗೂ ಸಹಾ ಅಡಿಕೆ ಮರಗಳು ಕಾಣುತ್ತಿವೆ ಎಂದರೆ ಸರಿಯಲ್ಲ, ಅವುಗಳು ಕಾಡು ಮರಗಳಾಗಿರುತ್ತವೆ. ಬೇಲಿಯ ಆಚೆಯಲ್ಲೂ ಸಹಾ ಅಡಿಕೆ ಮರಗಳು ಇವೆ ಎಂದರೆ ಸರಿಯಲ್ಲ.

ನನಗೂ ಹಾಗೂ ಆರೋಪಿಗಳಿಗೂ ಯಾವುದೇ ಮಾತುಕತೆ ಇಲ್ಲ ಎಂದರೆ ಸರಿ ಸಾಕ್ಷಿಯು ಮುಂದುವರೆದು ಆರೋಪಿಗಳು ಪರಿಚಯ ಇರುತ್ತಾರೆ ಎನ್ನುತ್ತಾರೆ. ಅಡಿಕೆ ಕಾಯಿಗಳನ್ನು ಕಡಿದಿರುವ ಬಗ್ಗೆ ನಾನು ಕಣ್ಣಾರೆ ನೋಡಿರುವುದಿಲ್ಲ ಎಂದರೆ ಸರಿ. ನಾನು ಆರೋಪಿಗಳನ್ನು ಪೋಲಿಸರಿಗೆ ತೋರಿಸಿದ ಮೇರೆಗೆ ನಂತರ ಅವರ ವಿರುದ್ಧ ಪ್ರಕರಣ ದಾಖಲಾಗಿರುತ್ತದೆ ಎಂದರೆ ಸರಿ.

ಅಡಿಕೆ ಮರಗಳನ್ನು ಕಡಿದಿರುವ ಬಗ್ಗೆ ಹಾಗೂ ಆರೋಪಿಗಳಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನಗೂ ಹಾಗೂ ಆರೋಪಿಗಳಿಗೂ ಆಗದೇ ಇರುವುದರಿಂದ ಆರೋಪಿಗಳ ವಿರುದ್ಧ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ

ಎಂದರೆ ಸರಿಯಲ್ಲ.

ಪೋಲಿಸರು ಘಟನೆ ನಡೆಯಿತು ಎನ್ನಲಾದ ಸ್ಥಳಕ್ಕೆ ಯಾವತ್ತೂ ಸಹಾ ಬಂದಿರುವುದಿಲ್ಲ, ಪಂಚರ ಸಮಕ್ಷಮದಲ್ಲಿ ನಾನು ಘಟನಾಸ್ಥಳವನ್ನು ತೋರಿಸಿರುವುದಿಲ್ಲ ಹಾಗೂ ಪೋಲಿಸರು ನಮ್ಮ ಸಮಕ್ಷಮದಲ್ಲಿ ಮಹಜರ್ ಕ್ರಮ ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ.3 ರಿಂದ 5ಕ್ಕೂ ಹಾಗೂ ಘಟನಾಸ್ಥಳಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2ನೇ ಆರೋಪಿ ಪರಃ ಕುಮಾರಿ ಎಂ ಜಿ., ವಕೀಲರವರಿಂದಃ**

(1ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ತಿಳಿಸಿರುತ್ತಾರೆ.)

**ಪಾಟೀ ಸವಾಲುಃ 3 ಮತ್ತು 4ನೇ ಆರೋಪಿಗಳ ಪರಃ ಶ್ರೀ ಎಂ ಎನ್ ಎಸ್.. ವಕೀಲರವರಿಂದಃ**

(1ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ತಿಳಿಸಿರುತ್ತಾರೆ.)

**ಪಾಟೀ ಸವಾಲುಃ 5ನೇ ಆರೋಪಿ ಪರಃ ಶ್ರೀ ಬಿ ಎಸ್ ಎನ್.. ವಕೀಲರವರಿಂದಃ**

(1ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ತಿಳಿಸಿರುತ್ತಾರೆ.)

ಮರುವಿಚಾರಣೆ ಃ ಇಲ್ಲ.

(ದಿನಾಂಕಃ12/03/2025 ರಂದು ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಓ.

ಸಹಿ/-
(ಐಶ್ವರ್ಯ ಚಿದಾನಂದ್ ಪಟ್ಟಣಶೆಟ್ಟಿ)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಃ ಕೊಪ್ಪ.

ಸಾಕ್ಷಿಯ ಸಹಿಃ